# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/787/2018/ಎಆರ್‌ಇ-15

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:04/05/2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರನ್ವಯ ವರದಿ

ವಿಷಯ: ಶ್ರೀ. ಹೆಚ್.ಸುಭಾನ್, ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ (ಪ್ರಸ್ತುತ ಉಪ ನಿರ್ದೇಶಕರು-2 ರವರ ಕಛೇರಿ ಹೊಸಪೇಟೆ) ಇವರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ದೂರುದಾರರಾದ ಶ್ರೀ.ವಿ.ತಿಮ್ಮಪ್ಪ ತಂದೆ ಲೇಟ್ ಗೋವಿಂದಪ್ಪ, ಮುದೇನೂರು, ಸಿರುಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಶ್ರೀ. ಹೆಚ್.ಸುಭಾನ್, ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ (ಪ್ರಸ್ತುತ ಉಪ ನಿರ್ದೇಶಕರು-2 ರವರ ಕಛೇರಿ ಹೊಸಪೇಟೆ) *(ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ)* ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. ದೂರಿನ ಸಂಕ್ಷಿಪ್ತ ಸಾರಾಂಶ:

ಬಳ್ಳಾರಿ ಜಿಲ್ಲೆ, ಸಿರಿಗುಪ್ಪ ತಾಲ್ಲೂಕಿನ ಕರೂರು ಹೋಬಳಿ ವ್ಯಾಪ್ತಿಯಲ್ಲಿರುವ ಕೆ.ಬಳಗಲಿ, ಹಿರೇಹಾಳ ಮತ್ತು ಮುದ್ದೇನೂರ ಗ್ರಾಮಗಳಲ್ಲಿ ಒಟ್ಟು 17 ಜನ ರೈತರು (ಫಲಾನುಭವಿಗಳಿಗೆ) ಅವರ ಸ್ವಂತ ಹಾಗೂ ಸರ್ಕಾರಿ ಜಮೀನಿನಲ್ಲಿ ಕೃಷಿಹೊಂಡ ಕಾಮಗಾರಿಗಳು ಸಂಪೂರ್ಣ ಕಳಪೆಮಟ್ಟದಿಂದ ಕೂಡಿದ್ದು, ಕಳಪೆ ಗುಣಮಟ್ಟದ ಕಾಮಗಾರಿ ನಡೆದಿರುವುದು ಹಾಗೂ ಆ ಕಾಮಗಾರಿಗಳಲ್ಲಿ ಎದುರುದಾರರು ಅವ್ಯವಹಾರ ನಡೆಸಿರುತ್ತಾರೆ ಎಂದು ದೂರಿನಲ್ಲಿ ಆಪಾದಿಸಿರುತ್ತಾರೆ.

3. ಮೇಲ್ಕಂಡ ದೂರಿಗೆ ಸಂಬಂಧಪಟ್ಟಂತೆ, ಬಳ್ಳಾರಿ ಜಿಲ್ಲಾ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಇವರಿಂದ ತನಿಖಾ ವರದಿಯನ್ನು ಕೇಳಲಾಗಿ, ಸದರಿ ತನಿಖಾಧಿಕಾರಿಯವರು ತಮ್ಮ ದಿ.20.2.2021ರ ವರದಿಯಲ್ಲಿ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡುವ ವಿಚಾರದಲ್ಲಿ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

4. ನಂತರ *ತನಿಖಾ ವರದಿ ಮತ್ತು ಅಡಕಗಳ ನಕಲುಗಳನ್ನು ಎದುರುದಾರರಿಗೆ ಕಳುಹಿಸಿ ಅವರ ಸಮಜಾಯಿಸಿಯನ್ನು ಕೇಳಲಾಗಿ, ಅವರು* ದಿ:23.3.2022 ರಂದು ತಮ್ಮ ಸಮಜಾಯಿಸಿ ಪತ್ರವನ್ನು ಹಾಗೂ ಆರ್.ಟಿ.ಸಿ. ನಕಲುಗಳನ್ನು ಪ್ರಾಧಿಕಾರಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ. ರೈತರ ಜಮೀನುಗಳ ಪಕ್ಕದಲ್ಲಿ ಹಳ್ಳವಿದ್ದು ಸದರಿ ಜಮೀನು ಮತ್ತು ಹಳ್ಳಕ್ಕೆ ಹೊಂದಿಕೊಂಡಂತೆ ಅವರವರ ಜಮೀನುಗಳಲ್ಲಿ ಕೃಷಿ ಹೊಂಡಗಳ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗಿದೆಯೇ ಹೊರತು ಜಮೀನುಗಳ ಹೊರಗಡೆ ನಿರ್ಮಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

5. ಎದುರುದಾರರು ನೀಡಿರುವ ಸಮಜಾಯಿಸಿಯು ತನಿಖಾಧಿಕಾರಿಯವರು ನೀಡಿರುವ ವರದಿಗೆ ವಿರುದ್ಧವಾಗಿರುತ್ತದೆ. ಇವರ ಸಮಜಾಯಿಸಿಯನ್ನು ಒಪ್ಪಕೊಂಡು ತನಿಖಾಧಿಕಾರಿಯವರ ತನಿಖಾವರದಿಯನ್ನು ತಿರಸ್ಕರಿಸಲು ಯಾವುದೇ ಸಕಾರಣಗಳು ಕಂಡುಬರುವುದಿಲ್ಲ. ದಿ.20.2.2021 ರಂದು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳ್ಳಾರಿ ಇವರ ತನಿಖಾ ವರದಿಯಲ್ಲಿ ಎದುರುದಾರರು ಕರ್ತವ್ಯಲೋಪವೆಸಗಿರುವುದು ಕಂಡು ಬರುತ್ತದೆ ಎಂದು ಸ್ಪಷ್ಟ ವಿವರಗಳನ್ನು ನೀಡಿರುವುದರಿಂದ, ದೂರಿನಲ್ಲಿ ಮಾಡಿರುವ ಆಪಾದನೆಗಳನ್ನು ಕೈಬಿಡಲು ಸಾಧ್ಯವಿಲ್ಲ.

6. ಆದ್ದರಿಂದ, ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಇವರ

ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

05/05/22

**[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]**
**ಉಪಲೋಕಾಯುಕ್ತ-2 ರವರು,**
**ಕರ್ನಾಟಕ ರಾಜ್ಯ, ಬೆಂಗಳೂರು.**